ನಿಧನ ವಾರ್ತೆ

ನಾಟಿವೈದ್ಯ ಜಗನ್ನಾಥ ಹೆಗ್ಡೆ



ಮೂಡುಬಿದಿರೆ: ಹಿರಿಯ ಗಡಿಕಾರ ಹಾಗೂ ನಾಟಿವೈದ್ಯರಾಗಿದ್ದ ಪಡುಕೋಣಾಜೆ ಗ್ರಾಮದ ಹೌದಾಲ್ ಹೊಸಮನೆಯ ಜಗನ್ನಾಥ ಹೆಗ್ಡೆ(72) ಅನಾರೋಗ್ಯದಿಂದ ಕಳೆದ ಸೋಮವಾರ ಸ್ವಗೃಹದಲ್ಲಿ ನಿಧನರಾದರು. ಕೃಷಿಕರಾಗಿದ್ದ ಅವರು ಹಲವು ವರ್ಷಗಳಿಂದ ನಾಟಿವೈದ್ಯರಾಗಿಯು ಸೇವೆ ಸಲ್ಲಿಸಿಕೊಂಡು ಬಂದಿದ್ದರು. ಪಡುಕೋಣಾಜೆಯ ಮೇಕಾರು ದೈವಸ್ಥಾನಕ್ಕೆ ಸಂಬಂಧಿಸಿ ಗಡಿಕಾರಾರರ ಗೌರವ ಹೊಂದಿದ್ದರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಹಗೂ ಓರ್ವ ಪುತ್ರಿ ಇದ್ದಾರೆ.

ಪ್ರಶಾಂತ ಗೌಡ



ಬೆಳ್ತಂಗಡಿ: ಕೆಎಸ್ಸಾರ್ಟಿಸಿ ಧರ್ಮಸ್ಥಳ ಡಿಪೋದಲ್ಲಿ ಬಸ್ ಚಾಲಕರಾಗಿ ಸೇವೆ ಸಲ್ಲಿಸುತ್ತಿದ್ದ ಚಾರ್ಮಾಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮುಗುಳಿತಡ್ಕ ನಿವಾಸಿ ಪ್ರಶಾಂತ ಗೌಡ (35) ಅಲ್ಪಕಾಲದ ಆಸೌಖ್ಯದಿಂದ ಅ.19ರಂದು ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ಅವರಿಗೆ ತಾಯಿ ಸಹೋದರ ಹಾಗೂ ಸಹೋದರಿ ಇದ್ದಾರೆ. ಇವರ ಸಹೋದರ ಜಯಾನಂದ ಗೌಡ ಸೆ.3ರಂದು ಕಕ್ಕಿಂಜೆ ಸಮೀಪ ಅವರು ಚಲಾಯಿಸುತ್ತಿದ್ದ ಬೈಕಿಗೆ ಲಾರಿ ಡಿಕ್ಕಿಯಾಗಿ ನಿಧನ ಹೊಂದಿದ್ದರು.

ದೇವಿಯನ್ನು ಪ್ರೀತಿಯಿಂದ ಆರಾಧಿಸಿ: ರಾಘವೇಶ್ವರ ಶ್ರೀ

ಶ್ರೀಗಳ ಆಶೀರ್ವಾದ ಪಡೆದ ಸಂಸದ ತೇಜಸ್ವಿ ಸೂರ್ಯ | ಡಾ. ಟಿ. ಶ್ಯಾಮ್ ಭಟ್ ಗುರುಭಿಕ್ಷಾಸೇವೆ

• **ಕನ್ನಡಪ್ರಭವಾರ್ತೆ** ಬೆಂಗಳೂರು

ದೇವಿಯನ್ನು ಪ್ರೀತಿಯಿಂದ ಆರಾಧಿಸಬೇಕು ಹೊರತು ಭೀತಿಯಿಂದಲ್ಲ. ಪ್ರೀತಿಯಿಂದ ಮಾಡಿದಾಗ ಆಚರಣೆಗೆ ಅರ್ಥ ಬರುತ್ತದೆ. ಭೀತಿಯಿಂದ ಮಾಡಿದಾಗ ಯಾವುದೇ ಅರ್ಥವಿಲ್ಲ ಎಂದು ಹೊಸನಗರ ಶ್ರೀರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿ ಹೇಳಿದ್ದಾರೆ.

ಬೆಂಗಳೂರಿನ ಗಿರಿನಗರದಲ್ಲಿರುವ ಶ್ರೀರಾಮಚಂದ್ರಾಪುರ ಮಠದ ಶಾಖೆಯಲ್ಲಿ ಬುಧವಾರ ನಡೆದ ನವರಾತ್ರ ನಮಸ್ಯಾ ಮಹಾ ಸಮಾರೋಪದ ಧರ್ಮ ಸಭೆಯಲ್ಲಿ ಮಾತನಾಡಿದ ಶ್ರೀಗಳು, ನಮ್ಮೊಳಗೇ ದೇವಿಯ ಸಾನ್ನಿಧ್ಯವಿದ್ದು, ನಮ್ಮ ಹೃದಯ ಮಂದಿರದಲ್ಲಿರುವ ದೇವಿಯನ್ನು ಅಂತರ್ಮುಖಿಗಳಾಗಿ ನೋಡಲು ಸೂಕ್ತ ಕಾಲ ಈ ನವರಾತ್ರಿ ಎಂದರು.

ನವರಾತ್ರಿಯಲ್ಲಿ ಉಪವಾಸದ ಆಚರಣೆಯು ವಿಶೇಷವಾಗಿದೆ. ಸರಿಯಾದ ಉಪವಾಸದ ಆಚರಣೆಯಿಂದ ಆರೋಗ್ಯ ವೃದ್ಧಿಯನ್ನು ಕಾಣಬಹುದಾಗಿದ್ದು, ಇದು ನವರಾತ್ರಿ ಆಚರಣೆಯ ಬಾಹ್ಯ ಫಲವಾಗಿದೆ. ನವರಾತ್ರಿಯಲ್ಲಿರುವ ನವವನ್ನು ಹೊಸತನದ ಕಾಲ ಎಂಬುದಾಗಿಯೂ ಪರಿಗಣಿಸಬಹುದಾಗಿದ್ದು, ನಮ್ಮ ಜೀವನದ ತಪ್ಪುಗಳನ್ನು ತಿದ್ದಿಕೊಳ್ಳಲು ಈ ನವರಾತ್ರಿಯ ವ್ರತವನ್ನು ಬಳಸಿಕೊಳ್ಳಬಹುದು ಎಂದು ಅಭಿಪ್ರಾಯಪಟ್ಟರು.



ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಡಾ. ಟಿ. ಶ್ಯಾಂ ಭಟ್ ಗುರುಭಿಕ್ಷಾಸೇವೆ ಸಮರ್ಪಿಸಿದರು.

ದೇವಿ ಪಾರಾಯಣ ಎಂಬುದು ಕೇವಲ ಕಾಟಾಚಾರದ ಕ್ರಮವಾಗಬಾರದು. ಸಪ್ತಶತೀ, ಲಲಿತೋಪಾಖ್ಯಾನಗಳಲ್ಲಿ ದೇವಿಯ ಅವತಾರ ವಿಶೇಷತೆಗಳಿದ್ದು, ಅದನ್ನು ಓದಿದಾಗ ದೇವಿಯನ್ನು ನಮ್ಮ ಮನಸ್ಸಿನೊಳಗೆ ದೇವಿಯ ಲೀಲೆಯನ್ನು ತುಂಬಿಕೊಳ್ಳಬಹುದು ಎಂದರು.

ಸನ್ಮಾನ: ಸಂಸದ ತೇಜಸ್ವಿಸೂರ್ಯ, ಖ್ಯಾತ ಗಾಯಕಿ ಶಿವಶ್ರೀ ಸ್ಕಂದಪ್ರಸಾದ್ ಶ್ರೀಗಳ ಆಶೀರ್ವಾದ ಪಡೆದರು. ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಡಾ. ಟಿ. ಶ್ಯಾಂ ಭಟ್ ಗುರುಭಿಕ್ಷಾಸೇವೆ ಸಮರ್ಪಿಸಿ ಆಶೀರ್ವಾದ ಪಡೆದರು. ಹಿರಿಯ ನ್ಯಾಯವಾದಿ ರಾಜಶೇಖರ ಹಿಲ್ಯಾರ್, ಖ್ಯಾತ ಗಾಯಕ ಗರ್ತಿಕೆರೆ ರಾಘಣ್ಣ ಶ್ರೀಗಳ ಆಶೀರ್ವಾದ ಪಡೆದರು.

ಪ್ರಧಾನ ಸಂಚಾಲಕ ರಮೇಶ ಹೆಗಡೆ ಕೊರಮಂಗಲ ಸಭಾ ಪೂಜೆ ನೆರವೇರಿಸಿದರು. ಸಂಚಾಲಕ ದೀಪಕ ಹೆಗಡೆ ಗೋಳಿಕ್ಕೆ ಕಾರ್ಯಕ್ರಮದ ಅವಲೋಕನ ಮಾಡಿದರು. ಶ್ರೀಮಠದ ಪ್ರಶಾನಾಧಿಕಾರಿ ಸಂತೋಷ ಹೆಗಡೆ, ವಿತ್ತಾಧ್ಯಕ್ಷ ಗಣೇಶ ಜೆ.ಎಲ್, ಹವ್ಯಕ ಮಹಾಮಂಡಲದ ಅಧ್ಯಕ್ಷ ಡಾ. ವೈ. ವಿ. ಕೃಷ್ಣಮೂರ್ತಿ, ಕಾರ್ಯದರ್ಶಿ ಮಹೇಶ ಚಟ್ನಳ್ಳಿ, ಕಾರ್ಯಕ್ರಮದ ಸಂಚಾಲಕ ವಾದಿರಾಜ ಸಾಮಗ, ಶ್ರೀವತ್ಸ ಮೂಡುಗೋಡು, ಗಾಯತ್ರೀ ಭಾಗ್ವತ್, ಶಿವರಾಜ ಪೆರ್ಮುಖ ಇದ್ದರು.

> **ನವರಾತ್ರಿಯಲ್ಲಿ ಉಪವಾಸದ ಆಚರಣೆಯು ವಿಶೇಷವಾಗಿದೆ. ಸರಿಯಾದ ಉಪವಾಸದ ಆಚರಣೆಯಿಂದ ಆರೋಗ್ಯ ವೃದ್ಧಿಯನ್ನು ಕಾಣಬಹುದಾಗಿದ್ದು, ಇದು ನವರಾತ್ರಿ ಆಚರಣೆಯ ಬಾಹ್ಯ ಫಲವಾಗಿದೆ. ನವರಾತ್ರಿಯಲ್ಲಿರುವ ನವವನ್ನು ಹೊಸತನದ ಕಾಲ ಎಂಬುದಾಗಿಯೂ ಪರಿಗಣಿಸಬಹುದಾಗಿದ್ದು, ನಮ್ಮ ಜೀವನದ ತಪ್ಪುಗಳನ್ನು ತಿದ್ದಿಕೊಳ್ಳಲು ಈ ನವರಾತ್ರಿಯ ವ್ರತವನ್ನು ಬಳಸಿಕೊಳ್ಳಬಹುದು.**
> • **ಶ್ರೀ ರಾಘವೇಶ್ವರ ಭಾರತೀ ಸ್ವಾಮೀಜಿ**
> ಹೊಸನಗರ ಶ್ರೀರಾಮಚಂದ್ರಾಪುರ ಮಠ.

ಸ್ಕೂಟರ್‌ಗೆ ಪಿಕಪ್ ಡಿಕ್ಕಿ ಹೊಡೆಸಿ ಇಬ್ಬರ ಹತ್ಯೆ: ಆರೋಪಿ ಚಾಲಕ ಸೆರೆ

• **ಕನ್ನಡ ಪ್ರಭ ವಾರ್ತೆ** ಉಳ್ಳಾಲ

ಬೋಳಿಯಾರ್‌ಪಡೀಲ್ ಪೆಟ್ರೋಲ್ ಪಂಪ್ ಸಮೀಪ ಸ್ಕೂಟರ್‌ಗೆ ಪಿಕಪ್ ವಾಹನದಿಂದ ಉದ್ದೇಶಪೂರ್ವಕವಾಗಿ ಡಿಕ್ಕಿ ಹೊಡೆಸಿ ಇಬ್ಬರು ಯುವಕರ ಸಾವಿಗೆ ಕಾರಣವಾದ ಪ್ರಕರಣವನ್ನು ಪೊಲೀಸರು ಭೇದಿಸಿದ್ದು, ತಲೆಮರೆಸಿಕೊಂಡಿದ್ದ ಪ್ರಮುಖ ಆರೋಪಿ ಹಫೀಝ್ ಅಲಿಯಾಸ್ ಅಪ್ಪಿಯನ್ನು ಬಂಧಿಸಿದ್ದಾರೆ ಎಂದು ನಗರ ಪೊಲೀಸ್ ಆಯುಕ್ತರು ತಿಳಿಸಿದ್ದಾರೆ.

ಉಳ್ಳಾಲ ತಾಲೂಕಿನ ಕಿನ್ಯಾ ಗ್ರಾಮದ ಇಸ್ಮಾಯಿಲ್ ನೀಡಿದ ದೂರಿನ ಆಧಾರದಲ್ಲಿ ಆರೋಪಿಯ ವಿರುದ್ಧ ಕೊಲೆ ಪ್ರಕರಣ ದಾಖಲಿಸಲಾಗಿತ್ತು.

ಮೊಬೈಲ್ ವಿಚಾರದಲ್ಲಿ ಆರಂಭವಾದ ಜಗಳ

ಸೋಮವಾರ ಸಂಜೆ ಜುನೈದ್ ಮತ್ತು ಅರ್ಫಾಝ್ ಸ್ಕೂಟರ್‌ನಲ್ಲಿ ಸಂಚರಿಸುತ್ತಿದ್ದಾಗ, ಮೊಬೈಲ್ ವಿಚಾರಕ್ಕೆ ಸಂಬಂಧಿಸಿದಂತೆ ಪಿಕಪ್ ಚಾಲಕ ಹಫೀಝ್ ಜತೆ ಮಾತಿನ ಚಕಮಕಿ ನಡೆದಿತ್ತು. ಇಬ್ಬರು ಯುವಕರೊಂದಿಗೆ ಹಫೀಝ್‌ಗೆ ಈ ಹಿಂದಿನಿಂದಲೂ ವೈಷಮ್ಯವಿತ್ತು ಎನ್ನಲಾಗಿದೆ. ಮಾತಿನ ಜಗಳದ ಬಳಿಕ ಜುನೈದ್ ಮತ್ತು ಅರ್ಫಾಝ್ ಸ್ಕೂಟರ್‌ನಲ್ಲಿ ಮುಡಿಪು ಕಡೆಗೆ ತೆರಳಿದ್ದರು.

ಈ ವೇಳೆ ಆಕ್ರೋಶಗೊಂಡ ಹಫೀಝ್ ತನ್ನ ಪಿಕಪ್ ವಾಹನದಲ್ಲಿ ಅವರನ್ನು ಹಿಂಬಾಲಿಸಿದ್ದಾನೆ. ಬೋಳಿಯಾರ್‌ಪೆಟ್ರೋಲ್ ಪಂಪ್ ಸಮೀಪ ತಲುಪಿದಾಗ, ಸ್ಕೂಟರ್‌ಗೆ ಹಿಂದಿನಿಂದ ಅತಿವೇಗವಾಗಿ ಡಿಕ್ಕಿ ಹೊಡೆಸಿದ್ದಾನೆ. ಡಿಕ್ಕಿಯ ತೀವ್ರತೆಗೆ ನಿಯಂತ್ರಣ ಕಳೆದುಕೊಂಡ ಸ್ಕೂಟರ್ ವಿದ್ಯುತ್ ಕಂಬಕ್ಕೆ ಅಪ್ಪಳಿಸಿದೆ. ಪರಿಣಾಮ, ರಸ್ತೆಗೆ ಎಸೆಯಲ್ಪಟ್ಟ ಇಬ್ಬರು ಯುವಕರು ಗಂಭೀರ ಗಾಯಗೊಂಡು ಮೃತಪಟ್ಟಿದ್ದರು. ಘಟನೆಯ ಬಳಿಕ ಆರೋಪಿ ಪಿಕಪ್ ವಾಹನವನ್ನು ಸ್ಥಳದಲ್ಲೇ ಬಿಟ್ಟು ಪರಾರಿಯಾಗಿದ್ದನು.

ಪೊಲೀಸರು ತಕ್ಷಣ ತನಿಖೆ ಆರಂಭಿಸಿ ಆರೋಪಿಗಾಗಿ ಶೋಧ ಕಾರ್ಯ ನಡೆಸಿದ್ದರು. ಕೊನೆಗೂ ಹಫೀಝ್‌ನನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ವಿಚಾರಣೆ ವೇಳೆ, ಗೆಳೆಯನ ಮೊಬೈಲ್ ವಿಚಾರವಾಗಿ ನಡೆದ ಮಾತಿನ ಚಕಮಕಿ ಹಾಗೂ ಹಿಂದಿನ ವೈಷಮ್ಯದಿಂದ ಉಂಟಾದ ಆಕ್ರೋಶದಲ್ಲಿ ಬೊಲೆರೊ ಪಿಕಪ್ ವಾಹನವನ್ನು ಯುವಕರ ಸ್ಕೂಟರ್‌ಗೆ ಡಿಕ್ಕಿ ಹೊಡೆಸಿರುವುದಾಗಿ ಆರೋಪಿ ಹೇಳಿದ್ದಾನೆ ಎಂದು ಪೊಲೀಸ್ ಆಯುಕ್ತರು ಮಾಹಿತಿ ನೀಡಿದ್ದಾರೆ.

ಅಪರಿಚಿತ ವೃದ್ಧ ಸಾವು: ಗುರುತು ಪತ್ತೆಗಾಗಿ ಮನವಿ

ಪುತ್ತೂರು: ಒಳಮೊಗ್ರು ಗ್ರಾಮದ ಕುಂಬ್ರದ ಬಳಿ ಸಂಭವಿಸಿದ ರಸ್ತೆ ಅಪಘಾತದಲ್ಲಿ 65ರಿಂದ 70 ವರ್ಷ ಪ್ರಾಯದ ಅಪರಿಚಿತ ವೃದ್ಧರೊಬ್ಬರು ಮೃತ ಪಟ್ಟಿದ್ದು, ಮೃತರ ಗುರುತು ಪತ್ತೆ ಆಗದೇ ಇರುವುದರಿಂದ ಪತ್ತೆಹಚ್ಚುವ ಸಲುವಾಗಿ ಪುತ್ತೂರು ಗ್ರಾಮಾಂತರ ಪೊಲೀಸರು ಸಾರ್ವ ಜನಿಕರ ಸಹಕಾರ ಕೋರಿದ್ದಾರೆ.



ಮೃತರು ಸುಮಾರು 65ರಿಂದ 70 ವರ್ಷ ವಯಸ್ಸಿನ ಪುರುಷರಾಗಿದ್ದು, ಗೋಧಿ ಮೈ ಬಣ್ಣ ಹೊಂದಿದ್ದಾರೆ. ಮುಖದಲ್ಲಿ ಬಿಳಿ ಮತ್ತು ಕಪ್ಪು ಮಿಶ್ರಿತ ಉದ್ದನೆಯ ದಟ್ಟ ಗಡ್ಡ ಮೀಸೆ ಇದೆ. ತಲೆಯ ಮುಂಭಾಗ ಮತ್ತು ಮಧ್ಯ ಭಾಗದಲ್ಲಿ ಕೂದಲು ಉದುರಿದ್ದು, ಎರಡೂ ಬದಿಗಳಲ್ಲಿ ಹಾಗೂ ಹಿಂಭಾಗದಲ್ಲಿ ಕಪ್ಪು-ಬಿಳಿ ಮಿಶ್ರಿತ ಕೂದಲಿದೆ. ಪ್ರಸ್ತುತ ಮೃತದೇಹವನ್ನು ಪುತ್ತೂರು ಸರ್ಕಾರಿ ಆಸ್ಪತ್ರೆಯ ಶವಾಗಾರದಲ್ಲಿ ಇರಿಸಲಾಗಿದೆ.

ಮೃತರ ಗುರುತು ತಿಳಿದವರು ಅಥವಾ ಅವರ ಕುಟುಂಬದವರು ಹಾಗೂ ವಾರಸುದಾರರ ಬಗ್ಗೆ ಮಾಹಿತಿ ಹೊಂದಿರುವವರು ಯಾರಾದರೂ ಇದ್ದರೆ ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ 8251232102 /9480805363 ಅಥವಾ ಪೊಲೀಸ್ ಕಂಟ್ರೋಲ್ ರೂಂ 112/0824-2220500 ಮೂಲಕ ಸಂಪರ್ಕಿಸುವಂತೆ ಪೊಲೀಸರು ಮನವಿ ಮಾಡಿದ್ದಾರೆ.

ಸ್ಕೂಟರ್‌ಗೆ ಟಿಪ್ಪರ್ ಡಿಕ್ಕಿ: ಸವಾರ ಗಂಭೀರ

ಮೂಲ್ಕಿ: ರಾಷ್ಟ್ರೀಯ ಹೆದ್ದಾರಿಯಲ್ಲಿ ಮುಕ್ಕ ಜಂಕ್ಷನ್ ಬಳಿ ಯೋಗೀಶ್ (55) ಎಂಬವರ ಸ್ಕೂಟರ್‌ಗೆ ಮಂಗಳೂರು ಕಡೆಯಿಂದ ಬಂದ ಟಿಪ್ಪರ್‌ಲಾರಿ ಡಿಕ್ಕಿ ಹೊಡೆದಿದೆ. ಯೋಗೀಶ್ ಸ್ಕೂಟರ್‌ಸಮೇತ ರಸ್ತೆಗೆ ಬಿದ್ದು ತಲೆಯ ಹಿಂಬದಿಗೆ ಕಾಲುಗಳಿಗೆ ಗಾಯವಾಗಿದೆ. ಗಾಯಾಳುವನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಮಂಗಳೂರು ಉತ್ತರ ಸಂಚಾರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಲ್ಲಿಕಾ ಜೆ ರೈಗೆ ಕಾಸರಗೋಡು ದಸರಾ ಕವಿ ಶ್ರೇಷ್ಠ ರಾಷ್ಟ್ರೀಯ ಪ್ರಶಸ್ತಿ



• **ಕನ್ನಡಪ್ರಭವಾರ್ತೆ ಪುತ್ತೂರು**

ಮೂಲತಃ ಬಂಟ್ವಾಳ ತಾಲೂಕು ಪೆರುವಾಯಿ ಕಳಾಯಿತಿಮಾರು ತರವಾಡು ಮನೆ ನಿವಾಸಿ ಪ್ರಸ್ತುತ ಪುತ್ತೂರು ನಿವಾಸಿ ಕವಯಿತ್ರಿ, ಲೇಖಕಿ, ಮುಕ್ರಂಪಾಡಿ ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜ್‌ನ ಕಾರ್ಯಾಧ್ಯಕ್ಷೆ ಮಲ್ಲಿಕಾ ಜೆ ರೈ ಗುಂಡ್ಯಡ್ಕಗೆ ಪ್ರತಿಷ್ಠಿತ ಕಾಸರಗೋಡು ದಸರಾ ಕವಿ ಶ್ರೇಷ್ಠ ರಾಷ್ಟ್ರೀಯ ಪ್ರಶಸ್ತಿ-2026 ನೀಡಿ ಗೌರವಿಸಿದೆ.

ಸೀತಮ್ಮ ಪುರುಷ ನಾಯಕ ಸ್ಮಾರಕ ಕನ್ನಡ ಭವನ ಮತ್ತು ಗ್ರಂಥಾಲಯ(ರಿ) ಕನ್ನಡ ಭವನ ಪ್ರಕಾಶನ, ಕಾಸರಗೋಡು ಮತ್ತು ಪಾಂಗೋಡು ಶ್ರೀ ದುರ್ಗಾಪರಮೇಶ್ವರಿ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ವತಿಯಿಂದ ಅ. 18ರಂದು ಆಯೋಜಿಸಿದ್ದ ಕಾಸರಗೋಡು ದಸರಾ ಸಾಂಸ್ಕೃತಿಕೋತ್ಸವ -2026 ಹಾಗೂ ರಾಷ್ಟ್ರೀಯ ಕವಿ ಸಮ್ಮೇಳನ -2026 ರಲ್ಲಿ ಈ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಕನ್ನಡ ಭವನದ ಪ್ರಮುಖರಾದ ಪ್ರದೀಪ್ ಬೇಕಲ್, ಡಾ ಕೆ ಎನ್ ವೆಂಕಟರಮಣ ಹೊಳ್ಳ, ಡಾ ವಾಮನ್ ರಾವ್ ಬೇಕಲ್, ವಸಂತ ಕೆರೆ ಮನೆ, ಸಂಧ್ಯಾರಾಣಿ ಟೀಚರ್, ಚುಸಾಪ ಸ್ಥಾಪಕ ಎಂ ಜಿ ಆರ್ ಅರಸ್, ಇರಾ ನೇಮು ಪೂಜಾರಿ, ಜಯಾನಂದ ಪೆರಾಜೆ, ಡಾ ಸುರೇಶ್ ನೆಗಳಗುಳಿ ಮತ್ತಿತರರು ಉಪಸ್ಥಿತರಿದ್ದರು.

CHANGE OF NAME

I, **DAYAVATHI** (OLD NAME), AGED ABOUT 52 YEARS, W/O YOGISH KULAL, RESIDING AT SANIDHYA, BEHIND POST OFFICE, SHIRVA POST & VILLAGE, KAUP TALUK, UDUPI mDISTRICT, KARNATAKA 574116., HAVE CHANGED MY NAME AS **DAYAVATHI KULAL** (NEW NAME) FOR ALL PURPOSES VIDE AFFIDAVIT DATED: 20-10-2026 BEFORE THE NOTARY WILSON H. RODRIGUES, UDUPI.

CHANGE OF NAME

I, **FATHIMA YUMNA RAYEES AHMED** (old name), W/o. Rayees Ahmed Ruknuddin, Residing at H NO.71, Darul Aman, Good Luck Road Jali, Bhatkal -581320, Uttara Kannada District, Karnataka, have changed my name as **FATHIMA YUMNA** (new name) for all purposes vide affidavit dated 21.10.2026 sworn before notary N M Hegde, Bhatkal.

CHANGE OF NAME

I, **RESHMA** (old name), W/o. Akbar Khan Sowdagar, Residing at Shabnam Street, Magdoom Colony, Bhatkal -581320, Uttara Kannada District, Karnataka, have changed my name as **RESHMA SOWDAGAR** (new name) for all purposes vide affidavit dated 20.10.2026 sworn before notary N M Hegde, Bhatkal.

CHANGE OF NAME

I, **MOHAMMED ASHRAF RUKNUDDIN** (old name), S/o. Ibrahim Ruknaddin, Residing at H NO.1102, Nageena Street, Magdoom Colony, Bhatkal -581320, Uttara Kannada District, Karnataka, have changed my name as **MOHAMMED ASHRAF IBRAHIM RUKNADDIN** (new name) for all purposes vide affidavit dated 21.10.2026 sworn before notary N M Hegde, Bhatkal.

CHANGE OF NAME

I, **FATHIMA YUMNA**, W/o. Rayees Ahmed Ruknuddin, Residing at H NO. 71, Darul Aman, Good Luck Road Jali, Post Bhatkal -581320 ,Uttara Kannada District, Karnataka, have changed my minor daughter name from **SIMRA** (old name) to **SIMRA RUKNUDDIN** (new name) for all purposes vide affidavit dated 21.10.2026 sworn before notary N M Hegde, Bhatkal.

CHANGE OF NAME

I, **NUZAIF JAFAR** (old name), S/o. Noor Ahmed Jufri Hajika, Residing at 4044, 2nd Cross, Basha Colony, Post Manki, Taluk Honnavar -581320, Uttara Kannada District, Karnataka, have changed my name as **NUZAIF JAFAR HAJIKA** (new name) for all purposes vide affidavit dated 21.07.2026 sworn before notary N M Hegde, Bhatkal.

CHANGE OF NAME

I, **VIJETHA** (Old name), D/o. Seetharama Poojary K, residing at 5-17/A, Daivagudde House, Baddakatte, Bantwal, Bantwal Taluk, D.K -574211, have changed my name as **VIJETHA SEETHARAMA POOJARY** (New Name) for all purposes vide Affidavit dated 15.10.2026 before Notary Mrs. Ashamani, Bantwal.

CHANGE OF NAME

I, **VIGNESH BHAT BELMAN** (Old name) S/o Krishna Belman Madhwaraya Bhat, residing at 1-75, Devasya House, Sri D P Temple Road, Belman, Karkala, Udupi-576111, Karnataka. India, have changed my name as **VIGNESH BHAT BELMAN KRISHNA** (New Name) for all purposes vide Affidavit dated 20.10.2026 duly notarazed for all purposes.

CHANGE OF NAME

I, **VAISHNAVI VIGNESH BHAT,** D/o Pundarikaksha Bhat, residing at 1-75 Devasya House, Sri D P Temple Road, Karkala Taluk, Belman, Udupi -576111, Karnataka State, have changed my Son's name from **SUDHANWA** (old name) to **SUDHANWA BHAT** (new name), S/o. VIGNESH BELMAN KRISHNA BHAT, for all purposes vide affidavit dated 20-10-2026 duly notarazed for all purposes.

CHANGE OF NAME

I, **SAVITHA NOVEL SEQUEIRA** (old name) W/O, Novel Sequeira, residing at, 8/525, J.L.B. Road, Vittalavadi, Kundapura, Udupi District 576201, Karnataka State, have changed my name as **SAVITHA SEQUEIRA** (new name) for all purposes vide affidavit dated 21/10/2026 sworn before Notary Ananda Bhandary G, Kundapura

CHANGE OF NAME

I, **RUVEELA** , W/O, MAHAMMED NAYEEM, residing at, 2-143, Haikady Melpete, Hiliyana Post ,Belve, Udupi District ,Karnataka State, have changed my minor Son name from **MOHAMMED AMNAN** (old name) to **MOHAMMED AMNAN MAHAMMED NAYEEM** (new name) for all purposes vide affidavit dated 21/10/2026 sworn before Notary Ananda Bhandary G, Kundapura.

CAUTION ಕನ್ನಡಪ್ರಭ
Readers are advised to make appropriate enquiries while responding to advertisements in these columns. Kannada Prabha Publications Ltd., does not vouch for any claims made by the Advertisers. The Printer, Publisher, Editor and Owner of Kannada Prabha Publications Ltd., shall not be held responsible /liable for any consequences, in case such claims are found to be false.

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ ಶ್ರೀ ಚಂದ್ರ ಕಾಂಚನ್, ತಂದೆ : ಕನಜಾರ ಮರ್ಕಲೇಶ್ವರ, ವಯಸ್ಸು ಸುಮಾರು 58 ವರ್ಷ, ವಾಸ : "ನಂದಾ ನಿಲಯ", ಮನೆ ನಂ. 3-138, ಕೋಡಿ ಗ್ರಾಮ, ಬ್ರಹ್ಮಾವರ ತಾಲೂಕು, ಉಡುಪಿ ಜಿಲ್ಲೆ ಇವರಿಗೆ ಸಂಬಂಧಿಸಿದಂತೆ, ಉಡುಪಿ ಜಿಲ್ಲೆ, ಬ್ರಹ್ಮಾವರ ತಾಲೂಕು, ಕೋಡಿ ಗ್ರಾಮದ ಸರ್ವೆ ನಂ. 30/12 ರಲ್ಲಿರುವ 0-93 ಸೆಂಟ್ಸ್ ವಿಸ್ತೀರ್ಣದ ಸ್ಥಿರಾಸ್ತಿಗೆ ಸಂಬಂಧಪಟ್ಟ, ದಿನಾಂಕ : 18-08-2004 ರಂದು ಬ್ರಹ್ಮಾವರ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ನೋಂದಣಿಯಾದ ಕ್ರಯಪತ್ರದ ಮೂಲಪ್ರತಿಯು, ದಸ್ತಾವೇಜು ಸಂಖ್ಯೆ : 1-00592-2004-05, ಸಿ.ಡಿ. ಸಂಖ್ಯೆ BHVD3ಗೆ ಸಂಬಂಧಿಸಿದ ದಾಖಲೆಯೊಂದಿಗೆ, ದಿನಾಂಕ : 02-10-2026 ರಂದು ಕಳೆದುಹೋಗಿರುತ್ತದೆ.

ಆದ್ದರಿಂದ ಸದರಿ ಮೂಲ ಕ್ರಯಪತ್ರವು ಯಾರಿಗಾದರೂ ದೊರೆತಲ್ಲಿ ಅಥವಾ ಅದರ ಬಗ್ಗೆ ಯಾವುದೇ ಮಾಹಿತಿ ಇದ್ದಲ್ಲಿ, ಈ ಪ್ರಕಟಣೆಯ ದಿನಾಂಕದಿಂದ 15 (ಹದಿನೈದು) ದಿನಗಳೊಳಗೆ ಕೆಳಕಂಡ ವಿಳಾಸಕ್ಕೆ ತಿಳಿಸಲು ಈ ಮೂಲಕ ಕೋರಲಾಗಿದೆ. ಸದರಿ ಮೂಲ ಕ್ರಯಪತ್ರವನ್ನು ಯಾರಾದರೂ ದುರುಪಯೋಗಪಡಿಸಿಕೊಂಡಲ್ಲಿ, ಅದಕ್ಕೆ ಸಂಬಂಧಿಸಿದಂತೆ ಕಾನೂನು ಬದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಈ ಮೂಲಕ ತಿಳಿಸಲಾಗಿದೆ.

ಸ್ಥಳ : ಉಡುಪಿ
ದಿನಾಂಕ : 21-10-2026

ಸಹಿ/- ನೀಲ್ ಪ್ರಿಯಾನ್ ಪಿರೇರಾ, ವಕೀಲರು
ಕಚೇರಿ ಸಂಖ್ಯೆ 5, ದೇವಿಕೆರೆ ಕಾಂಪ್ಲೆಕ್ಸ್, ಕೋಟ ಬಸ್ ನಿಲ್ದಾಣದ ಹತ್ತಿರ, ರಾಷ್ಟ್ರೀಯ ಹೆದ್ದಾರಿ-66, ಬ್ರಹ್ಮಾವರ ತಾಲೂಕು, ಉಡುಪಿ ಜಿಲ್ಲೆ.
ಮೊಬೈಲ್ : 9986951454 / 9986940433

ಮಾನ್ಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಮೂಡಬಿದರೆ ಇವರ ನ್ಯಾಯಾಲಯದಲ್ಲಿ

Crl Mis Case No .211/2026

ಆಲಾವತಿ, ಪ್ರಾಯ 68, ತೀನ ಸಪಲಿಗರ ಮಗಳು, ಮನೆ ಸಂಖ್ಯೆ 1-178, ಪುಲ್ಕೇರಿ ಬೈಪಾಸ್, ಸಾಣೂರು ಗ್ರಾಮ, ಕಾರ್ಕಳ ತಾಲೂಕು ಮತ್ತು ಇತರರು.

...ಅರ್ಜದಾರರು

ಮತ್ತು

1. ಜನನ ಮತ್ತು ಮರಣ ನೋಂದಣ